21	ಮಂಡ್ಯ	1569.500	393.300	0.000
22	ಮಂಗಳೂರು	1463.200	327.600	0.000
23	ಮೈಸೂರು	4692.400	1167.300	260.000
24	ರಾಯಚೂರು	4276.296	1065.182	92.700
25	ಶಿವಮೊಗ್ಗ	4317.700	1112.900	202.000
26	ತುಮಕೂರು	5862.808	1458.720	518.900
27	ಯಾದಗೀರ್	2709.500	678.900	95.200
	ಒಟ್ಟು	**96356.815**	**22652.275**	**3859.800**

4745 (5552) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ) :– ಮಾನ್ಯ ತೋಟಗಾರಿಕೆ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ತೋಟಗಾರಿಕೆ ಇಲಾಖೆಯಡಿ ಬರುವ ಉದ್ಯಾನವನಗಳು ಯಾವುವು (ವಿವರಿಸುವುದು);

ಆ) ಕಳೆದ 5 ವರ್ಷಗಳಿಂದ ಈ ಪಾರ್ಕುಗಳನ್ನು ಇಲಾಖೆಯಿಂದ ಅಭಿವೃದ್ಧಿ ಪಡಿಸಲು ಉಪಯೋಗಿಸಿದ ಹಣವೆಷ್ಟು; (ಕಾಮಗಾರಿಗಳ ಮಾಹಿತಿ ನೀಡುವುದು);

ಇ) ಈ ಉದ್ಯಾನವನಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸಲು ಸರ್ಕಾರದ ನಿಲುವೇನು?

ಶ್ರೀ ಕೆ. ಶ್ರೀನಿವಾಸಗೌಡ (ತೋಟಗಾರಿಕೆ ಸಚಿವರು) :

ಅ) ತೋಟಗಾರಿಕೆ ಇಲಾಖೆಯಡಿ 14 ಉದ್ಯಾನವನಗಳು ಇರುತ್ತವೆ. ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ.ಸಂ.	ಉದ್ಯಾನವನಗಳ ಹೆಸರು
1	ಕರ್ಜನ್ ಪಾರ್ಕ್ ಬ್ಲಾಕ್ – 1 ಭಾಗದ ಉದ್ಯಾನವನ
2	ಕರ್ಜನ್ ಪಾರ್ಕ್ ಬ್ಲಾಕ್ – 2 ಭಾಗದ ಉದ್ಯಾನವನ
3	ಕರ್ಜನ್ ಪಾರ್ಕ್ ಬ್ಲಾಕ್ – 3 ಭಾಗದ ಉದ್ಯಾನವನ
4	ನಿಷಾದ್‌ಭಾಗ್ ಪಾರ್ಕ್ ಉದ್ಯಾನವನ

5 ಕೇಂದ್ರ ಸಸ್ಯಾಗಾರ

6 ಜಲದರ್ಶಿನಿ ಅತಿಥಿ ಗೃಹ ಉದ್ಯಾನವನ

7 ಜಲಸನ್ನಿಧಿ (ಜಿಲ್ಲಾಧಿಕಾರಿಗಳ ನಿವಾಸ) ಉದ್ಯಾನವನ

8 ವಿಭಾಗಾಧಿಕಾರಿಗಳ ಕಛೇರಿ ಉದ್ಯಾನವನ

9 ಗೋರ್ಡಾನ್ ಪಾರ್ಕ್ ಸಸ್ಯಗಾರ ಉದ್ಯಾನವನ

10 ಜಿಲ್ಲಾ ಉದ್ಯಾನವನ

11 ಕೆ.ಆರ್.ಆಸ್ಪತ್ರೆ ಉದ್ಯಾನವನ

12 ಸರ್ಕಾರಿ ಭವನ ಅತಿಥಿ ಗೃಹ ಉದ್ಯಾನವನ

13 ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ಉದ್ಯಾನವನ

14 ಕರ್ನಾಟಕ ವಸ್ತು ಪ್ರದರ್ಶನ ಆವರಣದಲ್ಲಿಯ ತೋಟಗಾರಿಕೆ ಇಲಾಖೆಯ ಉದ್ಯಾನವನ

ಆ) ಕಳೆದ 5 ವರ್ಷಗಳಲ್ಲಿ (2000–01 ರಿಂದ 2004–05 ರವರೆಗೆ ಈ ಪಾರ್ಕುಗಳನ್ನು ಅಭಿವೃದ್ಧಿಪಡಿಸಲು ಒಟ್ಟು 41.98 ಲಕ್ಷ ರೂ.ಗಳನ್ನು ಉಪಯೋಗಿಸಲಾಗಿದೆ. ಕಾಮಗಾರಿಗಳ ಮಾಹಿತಿ ಕೆಳಕಂಡಂತಿದೆ.

1. ಕರ್ಜನ್ ಪಾರ್ಕ್ ಉದ್ಯಾನವನ ಭಾಗ–1ರಲ್ಲಿ ಮತ್ತು ಕರ್ಜನ್ ಪಾರ್ಕ್–2ರಲ್ಲಿ ವಿದ್ಯುತ್ ದೀಪಾಲಂಕಾರ ಕಂಬಗಳನ್ನು ಅಳವಡಿಸಿದೆ ಮತ್ತು ನೀರಾವರಿ ವ್ಯವಸ್ಥೆಗಾಗಿ ಮೋಟಾರ್ ಖರೀದಿ ಹಾಗೂ ಪೈಪ್ ಲೈನ್ ಅಳವಡಿಸಿದೆ.

2. ಸರ್ಕಾರಿ ಭವನ ಹಾಗೂ ಗೋರ್ಡಾನ್ ಪಾರ್ಕ್ ಉದ್ಯಾನವನಗಳಿಗೆ ಹೋಸ್ ಪೈಪ್ ಹಾಕಿಸಿದೆ.

3. ಕೇಂದ್ರ ಸಸ್ಯಾಗಾರ, ಕರ್ಜನ್ ಪಾರ್ಕ್, ಗೋರ್ಡಾನ್ ಪಾರ್ಕ್ ಸರ್ಕಾರಿ ಭವನ, ಜಲದರ್ಶಿನಿ ವಿಭಾಗಗಳಿಗೆ ಫಲಪುಷ್ಪ ಪ್ರದರ್ಶಿಕೆಗಳ ಅಭಿವೃದ್ಧಿ.

4. ಉದ್ಯಾನವನಗಳಿಗೆ ವಿವಿಧ ಜಾತಿಯ ಅಲಂಕಾರಿಕ ಗಿಡಗಳು ಹಾಗೂ ವಿವಿಧ ಜಾತಿಯ ಹೂ ಬೆಳೆಸಲು ಬಿತ್ತನೆ ಸಾಮಗ್ರಿ ಖರೀದಿ.

5. ಉಪಕರಣಗಳ ಮತ್ತು ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ ಮತ್ತು ಇತರೆ ಪರಿಕರಗಳ ಖರೀದಿ.

6. ಕೆ.ಆರ್.ಆಸ್ಪತ್ರೆ ನಿಷಾದಾಬಾದ್ ಉದ್ಯಾನವನದಲ್ಲಿ ಹುಲ್ಲುಹಾಸು ನಿರ್ಮಾಣ.

7. ಉದ್ಯಾನವನಗಳ ಪಂಪ್‌ಸೆಟ್ ಮೋಟರ್ ಮತ್ತು ಯಂತ್ರೋಪಕರಣಗಳ ದುರಸ್ತಿ.

8. ಸರ್ಕಾರಿ ಭವನ – 2, ಕೇಂದ್ರ ಸಸ್ಯಾಗಾರದಲ್ಲಿ, ನಿಷಾದ್‌ಭಾಗ್ ಪಾರ್ಕಿನಲ್ಲಿ, ಕರ್ಜನ್ ಪಾರ್ಕ್–3ರಲ್ಲಿ ನೀರಿನ ತೊಟ್ಟಿ ನಿರ್ಮಾಣ. ಕರ್ಜನ್ ಪಾರ್ಕ್‌ರಲ್ಲಿ ನೆಲಸಮತಟ್ಟು ಮಾಡುವುದು.

9. ಕರ್ಜನ್ ಪಾರ್ಕಿನಲ್ಲಿ ವಿವಿಧ ವಿದ್ಯುತ್ ಮೀಟರ್‌ಗಳನ್ನು ಒಂದೇ ಕಡೆ ಅಳವಡಿಕೆ ವೆಚ್ಚ.

10. ವಿವಿಧ ಉದ್ಯಾನವನಗಳಲ್ಲಿ ಹಸಿರು ಮನೆ, ಶೇಡ್ ನೆಟ್ ನಿರ್ಮಾಣ.

11. ಕರ್ಜನ್ ಪಾರ್ಕ್ – 1ರಲ್ಲಿ ಸಿಮೆಂಟ್ ಬೆಂಚ್, ಕಾರಂಜಿ ಟೈಲ್ಸ, ಗಾಜಿನ ಮನೆ ದುರಸ್ತಿ, ಪುರಾತನ ಕಾಲದ ವಿದ್ಯುತ್ ಕಂಬಗಳನ್ನು ಅಳವಡಿಸುವುದು.

12. ನಿಷಾದ್ ಭಾಗ್ ಉದ್ಯಾನವನದ ಸುತ್ತಲೂ ತಂತಿಬೇಲಿ ನಿರ್ಮಾಣ.

13. ಕರ್ಜನ್ ಪಾರ್ಕ್–3ರಲ್ಲಿ ಕುರುಚಲು ಗಿಡ ತೆಗೆದಿರುವುದು ಇತ್ಯಾದಿ ಕಾಮಗಾರಿಗಳು.

ಇ) ಈ ಉದ್ಯಾನವನಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸುವುದು ಸರ್ಕಾರದ ಉದ್ದೇಶವಾಗಿದೆ. ಅನುದಾನ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಈ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ ನಿರ್ವಹಿಸಲಾಗುವುದು.

4746 (5553) ಶ್ರೀ ಶಂಕರಲಿಂಗೇಗೌಡ. ಹೆಚ್. ಎಸ್. (ಚಾಮರಾಜ) :– ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಯಾವ ಯಾವ ಊರುಗಳಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಎಷ್ಟೆಷ್ಟು ಎಕರೆ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ (ವಿವರಿಸುವುದು);

ಆ) ಹಾಗೆ ಬೆಳೆದಂತ ಬೆಳೆಗಳನ್ನು ರೈತರು ಮಾರಾಟ ಮಾಡಲು ಯಾವ ಯಾವ ರೀತಿಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ;

ಇ) ಈ ಬೆಳೆಗಳ ಪ್ರೋತ್ಸಾಹಕ್ಕೆ ಸಂರಕ್ಷಣೆಗೆ ಸರ್ಕಾರ ಯಾವ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ? (ವೆಚ್ಚವಾದ ವಿವರಗಳನ್ನು ನೀಡುವುದು)